1 ಸಚಿವ 6 (44)

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಗೋವಿಂದರಾಜು ರವರ ನಿಯಮ 72ರ ಗಮನ ಸೆಳೆಯುವ ಸೂಚನೆ ಸಂಖ್ಯೆ: 44ಕ್ಕೆ ಉತ್ತರವನ್ನು ಒದಗಿಸುವ ಬಗ್ಗೆ.**

**ವಿಷಯ:-**

ಘನ ಮೈಸೂರು ಮಹಾರಾಜರ ಆಳ್ವಿಕೆಯಲ್ಲಿ 1931 ರ ಪೂರ್ವದಿಂದಲೂ ಎಲ್ಲಾ ಭೂಮಿಯು ಸರ್ಕಾರಿ ಖರಾಬು/ಗೋಮಾಳ ಎಂದು ನಮೂದಾಗಿದ್ದು, ಕಂದಾಯ ಇಲಾಖೆಯ ಸುಪರ್ದಿಯಲ್ಲಿರುತ್ತದೆ. ತದನಂತರ ರೈತರಿಗೆ ಕಾಲಕ್ರಮೇಣ ಮಹಾರಾಜರಿಂದಲೇ ಈ ಭೂಮಿಗಳು ಮಂಜೂರಾತಿಗೊಂಡಿದ್ದು, ಉಳಿದಂತಹ ಜಮೀನುಗಳನ್ನು ದನಕರುಗಳಿಗೆ ಇಂತಿಷ್ಟು, ಅರಣ್ಯಕ್ಕೆ ಇಂತಿಷ್ಟು ಎಂದು ಅಂದಿನ ಜಿಲ್ಲಾಧಿಕಾರಿಗಳು ಕಿರು ಅರಣ್ಯ, ಗ್ರಾಮ ಅರಣ್ಯ ಎಂದು ಅಧಿಸೂಚನೆಯಲ್ಲಿ ನಮೂದಿಸಿರುತ್ತಾರೆ. ಅದರಂತೆ ರೈತರು ಸುಮಾರು ನೂರಾರು ವರ್ಷಗಳಿಂದ ಕೃಷಿ ಮಾಡಿಕೊಂಡು ಜೀವನೋಪಾಯವನ್ನು ಮಾಡಿಕೊಂಡಿರುತ್ತಾರೆ. ಹಾಗೂ ಸರ್ಕಾರವೇ ನಿಯಮಾನುಸಾರ ಮಂಜೂರು ಮಾಡಿ ಅವರಿಗೆ ಸಂಬಂಧಪಟ್ಟ ಎಲ್ಲಾ ದಾಖಲೆಗಳನ್ನು ಸರ್ಕಾರವೇ ನೀಡಿದೆ. ರೈತರು ಎಲ್ಲಾ ದಾಖಲೆಗಳೊಂದಿಗೆ ಅವರವರ ಜಮೀನುಗಳ ಅನುಭವದಲ್ಲಿದ್ದು ಕೃಷಿ ಚಟುವಟಿಕೆಗಳನ್ನು ಮುಂದುವರೆಸುತ್ತಾ ಬಂದಿರುತ್ತಾರೆ.

ಪ್ರಸ್ತುತ ಅರಣ್ಯ ಇಲಾಖೆಯ ಸಿಬ್ಬಂದಿ ಮತ್ತು ಅಧಿಕಾರಿಗಳು ಪೊಲೀಸ್ ಇಲಾಖೆಯ ಸಹಯೋಗದೊಂದಿಗೆ 1931 ರ ಅಧಿಸೂಚನೆಯಲ್ಲಿ ಇದ್ದಂತಹ ಅರಣ್ಯ ವಿಸ್ತೀರ್ಣವನ್ನೇ ಅರಣ್ಯದೆಂದು ಪ್ರತಿಪಾದಿಸಿಕೊಂಡು, 1941 ರ ಫಾರೆಸ್ಟ್ ಸೆಟಲ್ ಮೆಂಟ್, ಸರ್ಕಾರದ ಸುತ್ತೋಲೆಗಳು ಮತ್ತು ಆದೇಶಗಳನ್ನು ಉಲ್ಲಂಘಿಸಿ ರೈತರು ಹಿಡುವಳಿ ಜಮೀನುಗಳಲ್ಲಿ ಬೆಳೆದಿದ್ದ ಬೆಳೆಗಳು, ಮರಗಿಡಗಳು, ನೀರಾವರಿ ಸೌಲಭ್ಯ ಮತ್ತು ತೋಟದ ಮನೆಗಳನ್ನು ಧ್ವಂಸ ಪಡಿಸಿ ಬಲವಂತವಾಗಿ ಅರಣ್ಯ ಇಲಾಖೆಗೆ ವಶಪಡಿಸಿಕೊಂಡು ರೈತರನ್ನು ಒಕ್ಕಲೆಬ್ಬಿಸುವ ಕಾರ್ಯಗಳನ್ನು ಕೈಗೊಳ್ಳುತ್ತಿರುತ್ತಾರೆ. ಹಾಗೂ ರೈತರ ಮೇಲೆ ಅನವಶ್ಯಕವಾಗಿ ಪೊಲೀಸ್ ಇಲಾಖೆಯಲ್ಲಿ ಎಫ್.ಐ.ಆರ್. ಗಳನ್ನು ದಾಖಲಿಸಿದ್ದಾರೆ. ಈ ವಿಷಯವು ರೈತರ ಹಿತದೃಷ್ಟಿಯಿಂದ ಮಹತ್ವದಾಗಿರುವುದರಿಂದ ಮಾನ್ಯ ಅರಣ್ಯ ಸಚಿವರ ಗಮನಸೆಳೆಯಲು ಬಯಸುತ್ತೇನೆ.

**ಉತ್ತರ:**

ಹಲವಾರು ಪ್ರಕರಣಗಳಲ್ಲಿ ಅರಣ್ಯ ವೆಂದು ಅಧಿಸೂಚನೆ ಹೊರಡಿಸಲಾಗಿದ್ದು, ನಂತರದ ಅವಧಿಯಲ್ಲಿ ಕಂದಾಯ ಇಲಾಖೆಯು ಖರಾಬು ಹಾಗೂ ಗೋಮಾಳ ಎಂದು ಆರ್.ಟಿ.ಸಿ ಯಲ್ಲಿ ನಮೂದಿಸಿ ರೈತರಿಗೆ ಮಂಜೂರು ಮಾಡಿರುವ ಪ್ರಕರಣಗಳು ಇರುತ್ತದೆ.

ಇಂತಹ ಪ್ರಕರಣಗಳನ್ನು ಇಲಾಖೆಯು ಪತ್ತೆ ಹಚ್ಚಿ ಕರ್ನಾಟಕ ಅರಣ್ಯ ಕಾಯ್ದೆ 1963 ರ ಸೆಕ್ಷನ್ 64(A) ರನ್ವಯ ಎಲ್ಲಾ ಪ್ರಕ್ರಿಯೆಯನ್ನು ಕೈಗೊಂಡು ನಿಯಾನುಸಾರ ಒತ್ತುವರಿ ತೆರವಿಗೆ ಕ್ರಮಕೈಗೊಳ್ಳಲಾಗುತ್ತಿದೆ.

ಇಂತಹ ಕೆಲವು ಪ್ರಕಣಗಳಲ್ಲಿ ರೈತರು ನ್ಯಾಯಾಲಯದ ಮೊರೆ ಹೋಗುತ್ತಿದ್ದಾರೆ. ನ್ಯಾಯಾಲಯವು ಸಹ ಒಂದು ಸಲ ಅರಣ್ಯವೆಂದು ಅಧಿಸೂಚಿನೆ ಹೊರಡಿಸಿದ ನಂತರ

ಅದನ್ನು ಬೇರೆ ಉದ್ದೇಶಗಳಿಗೆ ಮಂಜೂರು ಮಾಡಲು ಕಂದಾಯ ಇಲಾಖೆಗೆ ಅಧಿಕಾರ ಇಲ್ಲದೇ ಇರುವುದನ್ನು ತಿಳಿಸಿ ಈಗಾಗಲೇ ಮಂಜೂರು ಮಾಡಿರುವುದನ್ನು ರದ್ದು ಪಡಿಸಲು ಹಾಗೂ ಇಂತಹ ಅರಣ್ಯ ಭೂಮಿಗಳನ್ನು ಅರಣ್ಯ ಇಲಾಖೆಗೆ ಹಿಂದಿರುಗಿಸಲು ತೀರ್ಪು ಹೊರಡಿಸಿರುತ್ತದೆ.

ಅರಣ್ಯ ವೆಂದು ಅಧಿಸೂಚನೆ ಹೊರಡಿಸಿರುವ ಪ್ರದೇಶಗಳನ್ನು ಹೊರತು ಪಡಿಸಿ ಇತರ ವಿವಾದಿತ ರೈತರ ಜಮೀನುಗಳನ್ನು ಸಂಬಂಧಿಸಿದಂತೆ ಕಂದಾಯ ಹಾಗೂ ಅರಣ್ಯ ಇಲಾಖೆಗಳ ಸಹಭಾಗಿತ್ವದಲ್ಲಿ ಜಂಟಿ ಸರ್ವೇ ಮಾಡಿ ಅರಣ್ಯ ಒತ್ತುವರಿ ಬಗ್ಗೆ ಖಾತ್ರಿಪಡಿಸಿ ಕರ್ನಾಟಕ ಅರಣ್ಯ ಕಾಯ್ದೆ 1963 ರ ಸೆಕ್ಷನ್ 64(A) ರನ್ವಯ ಎಲ್ಲಾ ಪ್ರಕ್ರಿಯೆಯನ್ನು ಕೈಗೊಂಡು ನಿಯಮಾನುಸಾರ ಒತ್ತುವರಿ ತೆರವಿಗೆ ಕ್ರಮಕೈಗೊಳ್ಳಲಾಗುತ್ತಿದೆ.

ಮಾನ್ಯ ಸರ್ವೋಚ್ಚ ನ್ಯಾಯಾಲಯದ W.P (C.) No.202/1995 ರ ತೀರ್ಪಿನ ದಿನಾಂಕ: 15.05.2025 ಹಾಗೂ 22.05.2025 ರ ವಿವಿಧ I.A ಗಳಲ್ಲಿ ನೀಡಿರುವ ತೀರ್ಪಿನಂತೆ, ಅನಧಿಕೃತ ಅರಣ್ಯ ಭೂಮಿ ಮಂಜೂರಾತಿ ಕುರಿತು ಪ್ರಸ್ತುತ ವಿಶೇಷ ತನಿಖಾ ತಂಡ (SIT) ರಚಿಸಲಾಗಿದ್ದು, ಅನಧಿಕೃತ ಭೂ ಮಂಜೂರಾತಿಯನ್ನು ರದ್ದು ಪಡಿಸಲು ಎಲ್ಲಾ ಕ್ರಮ ಕೈಗೊಳ್ಳಲಾಗುತ್ತಿದೆ.

ಕಾನೂನು ಸುವ್ಯವಸ್ಥೆ ಕಾಪಾಡಿಕೊಳ್ಳಲು ಆರಕ್ಷಕ ಇಲಾಖೆಯ ಸಹಕಾರ ಪಡೆದು ಎಲ್ಲಾ ಪ್ರಕ್ರಿಯೆ ಕಾನೂನಿನ ಅಡಿಯಲ್ಲಿ ಕ್ರಮ ಕೈಗೊಳ್ಳಲಾಗುತ್ತಿದೆ.

**ಸಂಖ್ಯೆ: FEE/47/FGL/2026**

(ಈಶ್ವರ ಬಿ. ಖಂಡ್ರೆ)
ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು.